


International Journal of Kannada Research
www.kannadajournal.com

ISSN: 2454–5813
IJKR 2021; 7(2): 81-83
© 2021 IJKR
www.kannadajournal.com
Received: 04-02-2021
Accepted: 09-03-2021

**Jayasheela MN**
Assistant Professor,
HOD In Kannada Department,
Mysore University, JSS College
of Arts And Commetce,
Gundlupet, Karnataka, India

**Corresponding Author:**
**Jayasheela MN**
Assistant Professor,
HOD In Kannada Department,
Mysore University, JSS College
of Arts And Commetce,
Gundlupet, Karnataka, India

# ಕುವೆಂಪು “ಬೆರಳ್‌ಗೆ ಕೊರಳ್” ನಾಟಕದಲ್ಲಿನ ಗುರುತತ್ವ– ಒಂದು ವಿವೇಚನೆ

**Jayasheela MN**

"ಬೆರಳ್‌ಗೆ ಕೊರಳ್" ನಾಟಕ ಕುವೆಂಪು ಅವರ ಅದ್ಭುತ ಪ್ರತಿಭಾ ಸೃಷ್ಠಿಯಾಗಿದೆ. ಇದು ಅವರ ನಾಟಕಗಳಲ್ಲೆಲ್ಲಾ ನಾಯಕಮಣಿಯಂತೆ ಶೋಭಿಸುತ್ತದೆ. 'ಬೆರಳ್‌ಗೆ ಕೊರಳ್' ಎಂಬ ನಾಟಕದ ಹೆಸರೇ ಧ್ವನಿ ಪೂರ್ಣವಾಗಿದೆ. ಹೆಸರಿನಲ್ಲೇ ನಾಟಕದ ದರ್ಶನದ ಧ್ವನಿ ಅಡಗಿದೆ. ಮಹಾಭಾರತದಲ್ಲಿ ಕ್ವಚಿತ್ತಾಗಿ ಬರುವ ಏಕಲವ್ಯನ ಕಥಾಭಾಗ ಈ ನಾಟಕಕ್ಕೆ ವಸ್ತುವಾಗಿದೆ.

ಇದೇ ಕಥಾವಸ್ತುವನ್ನಿಟ್ಟುಕೊಂಡು ಕೈಲಾಸಂ ಅವರು 'ಪರ್ಪಸ್' (ಇಂಗ್ಲಿಷಿನಲ್ಲಿದೆ) ಎಂಬ ರೂಪಕವನ್ನು ಬರೆದರು. ಏಕಲವ್ಯ ಯಾವ ಉದ್ದೇಶಕ್ಕಾಗಿ ವಿದ್ಯೆಯನ್ನು ಕಲಿಯಲು ಬಂದಿರುತ್ತಾನೋ ಅದು ನೆರವೇರದೆಯಿರುವುದು ವಿಧಿಯ ಉದ್ದೇಶ. ಇದು ಪರ್ಪಸ್ ರೂಪಕದಲ್ಲಿ ಬರುವ ವಿಚಾರ.

ಗೋವಿಂದ ಪೈಯವರು ಇದೇ ಕಥಾವಸ್ತುವನ್ನಿಟ್ಟುಕೊಂಡು 'ಹೆಬ್ಬೆರಳು' ಎಂಬ ನಾಟಕ ಬರೆದರು. ಇದು ರುದ್ರನಾಟಕಗಳ ಮಾದರಿಯಲ್ಲಿ ರಚನೆಗೊಂಡಿದೆ. ಗೋವಿಂದ ಪೈಯವರು ಗೊಂದಳದವರನ್ನು ಮೇಳದವರನ್ನಾಗಿ ನಾಟಕದಲ್ಲಿ ತಂದಿದ್ದಾರೆ.

ಕುವೆಂಪು ಬೆರಳ್‌ಗೆ ಕೊರಳ್ ನಾಟಕದ ಕಥೆಯನ್ನು 3 ಭಾಗವಾಗಿ ವಿಂಗಡಿಸಿದ್ದಾರೆ. ಅದಕ್ಕೆ ಗುರು–ಕರ್ಮ–ಯಜ್ಞ ಎಂಬುದಾಗಿ ಹೆಸರನ್ನು ಕೊಟ್ಟಿದ್ದಾರೆ. ಆಯಾಭಾಗಗಳಲ್ಲಿ ಆಯಾ ತತ್ವಗಳನ್ನು ವಿವೇಚಿಸಿದ್ದಾರೆ. ಒಟ್ಟಾರೆ ಈ ಮೂರು ನಾಟಕಗಳು ಭಾರತೀಯ ದರ್ಶನವನ್ನು ಬಿಂಬಿಸಿದರು, ಅಂತಿಮವಾಗಿ ಕುವೆಂಪು ವಿಧಿವಿಲಾಸವನ್ನೇ ಹೇಳಿದ್ದಾರೆ.

ಮಹಾಭಾರತದ ಕಥೆಯ ಭಾಗವನ್ನೇ ಆಯ್ದುಕೊಂಡರೂ ಅದನ್ನು ನಾಟಕೀಯಗೊಳಿಸುವುದರಲ್ಲಿ ಹಾಗೂ ಆ ಕಥೆಯನ್ನು ತತ್ವದ ಆದರ್ಶದಲ್ಲಿ ಬಳಸಿಕೊಳ್ಳುವುದರಲ್ಲಿ, ಇಡೀ ಆಖ್ಯಾನವನ್ನೇ ತಮ್ಮ ದರ್ಶನಕ್ಕೆ ಕಾಣ್ಕೆಯನ್ನಾಗಿ ಮಾಡಿಕೊಂಡಿರುವುದರಲ್ಲಿ ಕುವೆಂಪು ಅವರ ಪ್ರತಿಭೆಯ ಹಿರಿಮೆಯನ್ನು ಕಾಣಬಹುದು.

ಗುರು ಸುಪ್ತಶಕ್ತಿಗೆ ಚೇತನ ನೀಡುವ ಸತ್ವವಾದರೆ, ಕರ್ಮ ಅದರಿಂದ ಕ್ರಿಯಾಶೀಲವಾಗುವ ಸತ್ವವಾಗಿದೆ. ಇವೆರಡರಿಂದ ನಿಷ್ಕಾಮ ತತ್ವಕ್ಕೇರಿ ತನ್ನನ್ನೇ ತಾನು ಅರ್ಪಿಸಿಕೊಳ್ಳುವ ಕ್ರಿಯೆ ಯಜ್ಞವಾಗಿದೆ. ಈ ಮೂರು ತತ್ವಗಳನ್ನು ಮೂರು ಪಾತ್ರಗಳು ಪ್ರತಿನಿಧಿಸುತ್ತವೆ. ಗುರುವಾಗಿ ದ್ರೋಣಾಚಾರ್ಯರು, ಕರ್ಮದ ಪ್ರತಿನಿಧಿ ಅರ್ಜುನನು, ಯಜ್ಞಕರ್ಮಕ್ಕೆ ಏಕಲವ್ಯನು ಸಂಕೇತವಾಗಿದ್ದಾರೆ. "ಚಾತುರ್ವರ್ಣ್ಯಂ ಮಯಾ ಸೃಷ್ಟ್ಯಂ ಗುಣಕರ್ಮ ವಿಭಾಗಶಃ" ಎಂಬ ಗೀತೆಯ ಮಾತಿನಂತೆ ಎಲ್ಲಾ ಅವಸ್ತಾಂತರಗಳು ಯಜ್ಞಕ್ಕೆ

ಬಿದ್ದಾಗಲೇ ಸಮಾನತೆ ಏರ್ಪಡುವುದು. ಕೆಳಗಿನ ಸ್ತರದಲ್ಲಿದ್ದು, ಸಾಧನೆಯಿಂದ ಮೇಲೇರಲು ಸಾಧ್ಯ. ಜಾತಿಯಿಂದ ಯಾರೂ ಕೀಳಲ್ಲ, ಯಾರೂ ಮೇಲಲ್ಲ ಎಂಬುದನ್ನು ಕುವೆಂಪು ಅವರ ಈ ನಾಟಕ ಧ್ವನಿಸುತ್ತದೆ.

ನಾಟಕ ದ್ವಂದ್ವದೊಂದಿಗೆ ಆರಂಭಗೊಳ್ಳುತ್ತದೆ. ಕೊನೆಗೆ ಅದ್ವೈತದಲ್ಲಿ ನಾಟಕ ಪೂರ್ಣಗೊಳ್ಳುತ್ತದೆ. ನಾಟಕ ತಾತ್ತ್ವಿಕವಾಗಿ ಅರ್ಥ ಪರಂಪರೆಗಳನ್ನು ಸೃಷ್ಟಿಸುತ್ತಾ ಸಾಗುತ್ತದೆ. ಕ್ರಿಯೆ ಕಾಡಿನ ನಡುವೆ ಪ್ರಾರಂಭವಾಗಿ ಕಾಡಿನ ಮಧ್ಯೆಯೇ ಪೂರ್ಣಗೊಳ್ಳುವುದರಿಂದ ನಾಟಕದ ಭಾವಕ್ಷೇತ್ರ ಗಟ್ಟಿಯಾಗಿದೆ. ಕಾಡು ಜೀವನದ ಜಟಿಲತೆಯ ಸಂಕೇತವೂ ಆಗಿದೆ. ನಾಟಕದ ಕ್ರಿಯೆ ಕಾಲೈಕ್ಯ ಸ್ಥಳೈಕ್ಯಗಳನ್ನು ಹೊಂದಿದೆ. ಹಾಗಾಗಿ ಪೂರ್ವ ಘಟನೆಗಳನ್ನು ಸಿಂಹಾವಲೋಕನ ಕ್ರಮದಲ್ಲಿ ತರಲಾಗಿದೆ. ಪಾತ್ರಗಳಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿಕೊಳ್ಳಲಾಗಿದೆ. ಆದರೆ ಹಾಗೆ ಮಾಡಿಕೊಂಡ ಮಾರ್ಪಾಡುಗಳು ಹೆಚ್ಚುಗಟ್ಟಿಯಾಗಿದೆ.

ಹಿಂದಿನಿಂದಲೂ ಗುರುವಿಗೆ ಮಹತ್ವದ ಸ್ಥಾನವನ್ನು ನೀಡಿದ್ದೇವೆ. "ನರಜನ್ಮದ ತೊಡೆದು ಹರಜನ್ಮವ ಮಾಡುವವನು ಗುರು" ಗುರುಶಿಷ್ಯನ ಮನಸ್ಸಿನ ಅಂದಕಾರವನ್ನು ತೊಲಗಿಸಿ ಜ್ಞಾನದ ಬೆಳಕನ್ನು ನೀಡುವವನು. "ಒಳ್ಳೆ ಗುರುವಿನ ಉಪದೇಶದಿಂದ ಪಾಪಗಳು ನಾಶವಾಗುವುದೆಂದು" ಸರ್ವಜ್ಞನು ಹೇಳಿದ್ದಾನೆ. ಪುರಂದರದಾಸರು "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದಿದ್ದಾರೆ. ರಾಘವಾಂಕ– "ಹರಮುನಿದರೆ ಗುರು ಕಾಯ್ವನು, ಗುರುಮುನಿದರೆ ಹರಕಾಯನು" ಎಂದಿದ್ದಾನೆ. ಹೀಗೆ ಗುರುಪರಂಪರೆ ಹಿಂದಿನಿಂದಲೂ ಅನುಚಾನಾಗಿ ನಡೆದು ಬಂದಿದೆ. ಇದಕ್ಕೆ ಕುವೆಂಪು ಅವರ ಬೆರಳ್‌ಗೆ ಕೊರಳ್ ನಾಟಕವು ಸಾಕ್ಷಿಯಾಗಿದೆ.

ಮೊದಲಿಗೆ ಬರುವ 'ಗುರುತತ್ವ'ದಲ್ಲಿ ಗುರುಶಿಷ್ಯರ ಸಂಬಂಧ ಎಂತಹದ್ದು? ಅದು ಹೇಗಿರಬೇಕೆಂಬುದನ್ನು ತಿಳಿಸಲಾಗಿದೆ. ನಾಟಕದ ಉದ್ದಕ್ಕೂ ಗುರುವಿನ ಪ್ರಭಾವ ಕಂಡುಬರುತ್ತದೆ. ನಾಟಕದ ಪ್ರಾರಂಭವೇ ಅತ್ಯಂತ ಮಾರ್ಮಿಕವಾಗಿದೆ.

ರಾಮಕೃಷ್ಣ ಪರಮಹಂಸರು ಹೇಳುವಂತೆ "ಗುರುಕೃಪೆ ಬೀಸುವ ಗಾಳಿಯಿದ್ದಂತೆ, ಮಾನವರ ಹೃದಯಗಳು ಗಾಳಿಪಟಗಳಿದ್ದಂತೆ, ಯಾವಾಗ ಯಾರು ಬೇಕಾದರೂ ಗಾಳಿಪಟಗಳನ್ನು ಬಿಚ್ಚಿದರೆ ಅದರ ಫಲ ದೊರೆಯುತ್ತದೆ.

ತ್ರಿಮೂರ್ತಿಗಳಿಗೆ ಸಮಾನವಾದ ಗುರುವಿನ ಸ್ತುತಿಯಿಂದ ನಾಟಕ ಶುರುವಾಗುತ್ತದೆ. ಇಡೀ ನಿಸರ್ಗದ ಚೆಲುವಿಗೆ ಭಕ್ತಿಯ ಲೇಪನವನ್ನು ಕೊಟ್ಟು ಕುವೆಂಪು ವರ್ಣಿಸಿರುವ ರೀತಿ ವರ್ಣನಾತೀತವಾಗಿದೆ.

> ಗುರುರ್ಬ್ರಹ್ಮಾ ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರಃ!
> ಗುರುರೇವ ಪರಬ್ರಹ್ಮ ತಸ್ಮೈ ಶ್ರೀಗುರುವೇ ನಮಃ॥
> ನಿತ್ಯಂಶುದ್ಧ ನಿರಾಕಾರಂ ನಿರಾಭಾಸಂ ನಿರಂಜನಂ
> ನಿತ್ಯಬೋಧಂ ಚಿದಾನಂದಂ ಗುರುಬ್ರಹ್ಮ ನಮಾಮ್ಯ ಹಂ॥

ಇಂದು ಗುರುವೈತಪ್ಪನೆನ್ನೀ ವನಸ್ಥಲಕೆ! ಎಂದು ಏಕಲವ್ಯ ಮುಂದೆ ಮನಸ್ಥಲಕೆ ಎನ್ನುತ್ತಾನೆ. ಹೀಗೆ ತನುಮನಗಳಲ್ಲೆಲ್ಲಾ ಗುರುವೇ ಆವರಿಸಿಕೊಂಡಿರುವ ಏಕಲವ್ಯನಿಗೆ ಇಡೀ ಪರಿಸರವೆಲ್ಲಾ ಭಕ್ತಿಭಾವದಿಂದ ತೋರುವುದು ಸಹಜವೇ ಆಗಿದೆ. "ಮಂಜು ಮೋಡಂ, ನೋಡ, ಗುರುವುಟ್ಟ ಧವಳೋತ್ತರೀಯದಂಚಲ ಮೆನಲ್"[2] ಎನ್ನುತ್ತಾನೆ. ದೃಷ್ಟಿಯಂತೆ ಸೃಷ್ಟಿ ಎಂಬುದು ಸತ್ಯ. "ಬದುಕಿದುದಕೀ ಸುದಿನಮನ್ ಕಂಡೆ" ಎಂದು ಆನಂದಭರಿತನಾಗಿರುತ್ತಾನೆ. ಪ್ರಕೃತಿಯ ಮಂಗಳ ಶಕ್ತಿಗಳನ್ನೆಲ್ಲಾ ಗುರುವಿನ ಸ್ವಾಗತಕ್ಕಾಗಿ ಆಹ್ವಾನಿಸುತ್ತಾನೆ. ಇವೆಲ್ಲದರಿಂದ ಏಕಲವ್ಯನಿಗಿದ್ದ ಗುರುಭಕ್ತಿ, ಪ್ರೀತಿಗಳು ವ್ಯಕ್ತವಾಗುತ್ತದೆ.

ಇಂತಹ ಶುಭ ಸಂದರ್ಭದಲ್ಲಿಯೇ ಒಂದು ವಿಷಣ್ಣ ರೇಖೆಯೂ ಹಾದುಹೋಗಿದೆ. ಅದು ಏಕಲವ್ಯನಿಗೆ ಹಿಂದಿನ ರಾತ್ರಿ ಬಿದ್ದ ಕನಸು. ಆ ಕನಸೂ ಸಹ ಅನೇಕ ಸಾಂಕೇತಿಕ ಅಂಶಗಳಿಂದ ಕೂಡಿದೆ". "ಇಂತಪ್ಪ ಶುಭದಿನಕೆ ಅದೆಂತಪ್ಪ ನಾಂದಿಯೊ!"[3] ಎಂದು ಕನಸನ್ನು ನೆನೆಸಿಕೊಂಡು ಏಕಲವ್ಯ ನಿಟ್ಟುಸಿಡುತ್ತಾನೆ. ಮುಂದಿನ ಅಶುಭಕ್ಕೆ ಇದು ಸೂಚನೆಯಾಗಿದೆ. ಏಕಲವ್ಯನ ಅಂತರಾತ್ಮಕ್ಕೆ ಅದು ಸ್ಪಷ್ಟವಾಗಿ ಗೋಚರಿಸಿಯೂ ಇದೆ.

ಅಷ್ಟರಲ್ಲಿ ತಾಯಿ ಮಗ ಏನೂ ತಿನ್ನದೇ ಹೋದನಲ್ಲ ಎಂದು ಉಣಿಸನ್ನು ಹೊತ್ತುಕೊಂಡು ಬರುತ್ತಾಳೆ. ಹಾಗೆ ತಂದ ಆಹಾರವನ್ನು ಜಿಂಕೆ ಆಪೋಶನ ತೆಗೆದುಕೊಳ್ಳುತ್ತದೆ. ಇದೂ ಸಹ ಮುಂದೆ ಅರ್ಜುನ ದ್ರೋಣರ ಮೂಲಕ ಏಕಲವ್ಯನ ಹೆಬ್ಬೆರಳನ್ನು ತೆಗೆದುಕೊಳ್ಳುವ ಸಂಕೇತವನ್ನು ಸೂಚಿಸುತ್ತಿದೆ.

ಇಲ್ಲಿ ತೆರೆದುಕೊಳ್ಳುವ ಏಕಲವ್ಯನ ತಾಯಿಯ ಪಾತ್ರ ಕುವೆಂಪು ಅವರ ಸೃಷ್ಟಿಯಾಗಿದೆ. ಗುರುಬರುವ ಮೊದಲು ತಾಯಿ ಬರುವುದು ನಾಟಕದ ಮುಂದಿನ ಹಿನ್ನೆಲೆಗೆ ಸೂಕ್ತವಾಗಿವೆ. "ಮನೆಯೇ ಮೊದಲ ಪಾಠಶಾಲೆ. ಜನನಿ ತಾನೇ ಮೊದಲ ಗುರುವು' ಎನ್ನುವಂತೆ ಗುರು ಬರುವ ಮೊದಲು ತಾಯಿ ಬರುವುದು ಸೂಕ್ತವಾದ ವೇದಿಕೆಯನ್ನು ನಿರ್ಮಿಸಿದಂತಿದೆ. ತಾಯಿ ಗುರುವಿನ ಪ್ರತಿರೂಪ, ಮಮತೆಯ ಮಾತೆಯಾಗಿ ಆರಾಧಿಸುವ ಶಕ್ತಿಯೇ ವಿಧಿಯವಾಣಿಯೂ ಆಗಬಲ್ಲದೆಂಬ ಸೂಕ್ಷ್ಮವನ್ನು ಕುವೆಂಪು ಈ ಪಾತ್ರದ ಮೂಲಕ ತಂದಿದ್ದಾರೆ.

ತಾಯಿ ಮಕ್ಕಳ ಸಂಭಾಷಣೆ ಸೊಗಸಾಗಿ ಸಾಗಿದೆ. ತಾಯಿ–ಮಗ–ನಿಸರ್ಗ ಎಲ್ಲವೂ ನಾಟಕದಲ್ಲಿ ರಸಪೂರ್ಣವಾಗಿ ಮೂಡಿಬಂದಿದೆ. ಹಿಂದೆ ನಡೆದ ಕಥೆಯಿಂದ ಹಿಡಿದು ಇಲ್ಲಿಯವರೆಗಿನ ವಿಷಯವನ್ನೆಲ್ಲಾ ಏಕಲವ್ಯ ತಾಯಿಗೆ ಕಥೆ ಹೇಳುವ ರೀತಿಯಲ್ಲಿ ಚಿತ್ರಿತವಾಗಿದೆ. ಏಕಲವ್ಯನ ಮಾತುಗಳು ದೀರ್ಘವಾಗಿ ಬಂದರು ನಾಟಕದ ಕ್ರಿಯೆಗೆ ಎಲ್ಲೂ ಧಕ್ಕೆಯಾಗಿಲ್ಲ. ಮಾತುಗಳು ಕೂಡ ನಾಟಕೀಯವಾಗಿ ಸಾಗಿದೆ.

ತನ್ನ ಗುರುವಿನ ಬಗ್ಗೆ ತಾಯಿಯ ಮುಂದೆ ಆನಂದದಿಂದ ಮನದುಂಬಿ ಹೇಳಿಕೊಳ್ಳುತ್ತಾನೆ. ಗುರು ಮಹಿಮೆಯನ್ನು ತಾಯಿಯ ಮುಂದೆ ಎಷ್ಟು ವರ್ಣಿಸಿದರೂ ಸಾಲದು "ತಿಳಿದವನ್, ಅಕ್ಕರೆಯುಳ್ಳವನ್, ತಿಳಿಗೊಂಡವನ್, ದಿವ್ಯ ಜ್ಞಾನಿಯೆಂಬರ್, ಸಮದರ್ಶಿಯೆಂಬರ್, ಧನುರ್ವಿದ್ಯಾ ದೇವನೆಂಬರ್ ದಿವ್ಯಜ್ಞಾನಿಯೆಂಬರ್"[4] ಈ ಮಾತುಗಳಿಂದ ಗುರು ದ್ರೋಣರ ವ್ಯಕ್ತಿತ್ವ ಕಣ್ಣಿಗೆ ಕಟ್ಟುತ್ತದೆ. ಗುರುವೇ ದೇವರು, ಬೇರೆ ದೇವರ ಅವಶ್ಯಕತೆಯೆ ಇಲ್ಲ ಏಕಲವ್ಯನಿಗೆ.

ನಾಟಕದ ಕಥೆ ಉದ್ದಕ್ಕೂ ಸಾಂಕೇತಿಕವಾಗಿಯೇ ಸಾಗುತ್ತದೆ. "ಬಿಯದರೇಂ? ಪಾರ್ವರೇಂ? ನೋಂಪಿ ಗೆರಡುಂಟೆ"[5] "ಶೂದ್ರನಾದೊಡಮೇನ್? ಸಮರ್ಥನ್,[6] "ಮಾಣ್, ಬಚ್ಚು, ಮಚ್ಚರಮಂ: ಅವರ ನಾಡವರ ಪಾಡು: ನಮಗಿರ‍್ಕೆ ನಮ್ಮ ಕಾಡು"[7] ಇಂತಹ ಮಾತುಗಳು ನಾಟಕದ ಹಿರಿಮೆಯನ್ನು ಹೆಚ್ಚಿಸಿವೆ. ಹಿತಮಿತವಾಗಿ ಸಂದರ್ಭೋಚಿತವಾಗಿ ಬಂದಿರುವ ಇಂತಹ ಮಾತುಗಳನ್ನು ಕುವೆಂಪು ಅವರು ಕಲಾತ್ಮಕತೆಯ ಚೌಕಟ್ಟಿನೊಳಗೆ ಸೊಗಸಾಗಿ ಮೂಡಿದ ಕಥಾಚಿತ್ರದಂತೆ ಮನಮೋಹಕವಾಗಿ ಮೂಢಿಸಿದ್ದಾರೆ.

ಘಟನೆಗಳು ನಾಟಕೀಯ ಶೈಲಿಯಲ್ಲೇ ಸಾಗಿದೆ. ತಾಯಿಯ ಮುಗ್ಧತೆ "ಅದಾವುದಾ ಪೊಸದೇವರ್? ಪುಟ್ಟಿದುದೊ? ಬೇಂಟೆ ದೇವರ ಮರಿಯೊ?[8] ಮಗನ ಹಾಸ್ಯ "ಮರಿಯಿಕ್ಕಲೆಂ ನೀನ್ ಸಾಕುವ ಕೋಳಿಯೊ?"[9] ತಾಯಿ–ಮಗ ಇವರ ಅನ್ಯೋನ್ಯತೆ ವರ್ಣನಾತೀತ. "ನಿನ್ನೊಲ್ಮೆ ಬಾಳ್ ಬೆಳಕಾಗಿರಲ್ ಖಗಂ, ಮಿಗಂ, ಗಿರಿ, ದರಿ, ಬಾನ್, ಕಾನ್, ಎಲ್ಲವುಂ ಸವಿ"[10] ಎನ್ನುವ ಮಾತುಗಳು ಸೊಗಸಾಗಿ ಮೂಡಿಬಂದಿದೆ. ನಾಟಕಕಾರರಾದ ಕುವೆಂಪು ಅವರ ಯುಗಧರ್ಮ ಮನೋಧರ್ಮಗಳು ವ್ಯಕ್ತವಾಗಿದೆ. ಇಲ್ಲಿ ಬರುವ "ದ್ರೋಣ ಶಿಷ್ಯನ್" ಎಂಬ ಮಾತು ಬಹುಮುಖ್ಯ ಕಥೆ. ಅರ್ಜುನನ ಅಹಂಕಾರ, ಗುರುವಿನ ಔದಾರ್ಯ, ಏಕಲವ್ಯನ ಗುರುಭಕ್ತಿಗಳನ್ನು ಅನಾವರಣಗೊಳಿಸುತ್ತದೆ.

ಇಲ್ಲಿನ ಏಕಲವ್ಯ ಮಹಾಭಾರತದ ಏಕಲವ್ಯನಂತೆ ಬರಿಯ ಒಂದು ಚೇತನ ಮಾತ್ರವಲ್ಲ ಗುರುವಿನ ಪ್ರಿಯಶಿಷ್ಯ, ಸಾಧನೆಯಿಂದ ಮೇಲೆ ಬಂದವನು. ಮೂಲ ಭಾರತದಲ್ಲಿ ದ್ರೋಣರು ಏಕಲವ್ಯನಿಗೆ "ಅನ್ನದ ಋಣಕ್ಕಾಗಿ" ಅರ್ಜುನನಿಗೆ ನೀಡಿದ ವಚನನಿಷ್ಠೆಗಾಗಿ ಕ್ಷತ್ರಿಯನಲ್ಲದ ಏಕಲವ್ಯನಿಗೆ ವಿದ್ಯೆ ಕಲಿಸಿಕೊಡುವುದಿಲ್ಲ. ಹರಸಿ ಬೀಳ್ಕೊಡುತ್ತಾರೆ. "ಬೆರಳ್‌ಗೆ ಕೊರಳ್' ನಾಟಕದಲ್ಲಿ ದ್ರೋಣರು ಅರಸು ಮಕ್ಕಳು ಕರುಬಿದಿರೂ ತಮ್ಮ ಮನೆಯಲ್ಲಿ ಆಶ್ರಯನೀಡಿ ಮಗನಾದ ಅಶ್ವತ್ಥಾಮನೊಂದಿಗೆ ಪಾಂಡವರು ಕೌರವರಿಗೆ ವಿದ್ಯೆಯನ್ನು

ಕಲಿಸುವಾಗ ನೋಡಿ ಕಲಿಯುವಂತೆ ತಿಳಿಸಿ ವಿದ್ಯೆ ಕಲಿಸುತ್ತಾರೆ. ಹಾಗಾಗಿ ಪ್ರಾರಂಭದ ಹಂತದ ವಿದ್ಯೆಗಳನ್ನು ಏಕಲವ್ಯ ಕಲಿತಿರುತ್ತಾನೆ. "ಗುರು ಮುಖೇನ ಬರದೆ ಯಾವ ವಿದ್ಯೆಯು ಸಿದ್ಧಿಸುವುದಿಲ್ಲ" ಎಂಬುದನ್ನು ಇಲ್ಲಿ ಹೇಳಿದಂತಿದೆ. ತಂದೆಯ ಅವಸಾನದ ನಂತರ ಗುರುವಿನ ಹರಕೆಯನ್ನು ಹೊತ್ತು ಕಾಡಿಗೆ ಮರಳಿಬರುತ್ತಾನೆ. ದ್ರೋಣರ ಶರೀರ ಭೌತಿಕವಾಗಿ ಏಕಲವ್ಯನ ಮುಂದೆ ಇಲ್ಲದಿದ್ದರೂ ದ್ರೋಣಗುರು ಏಕಲವ್ಯನಲ್ಲಿ ಉದ್ಭವಿಸುತ್ತಾರೆ. ಏಕಲವ್ಯ ದಿನದಿನಕ್ಕೂ ಶ್ರದ್ಧೆ-ಭಕ್ತಿ-ಸಾಧನೆಯಿಂದ ಅಭ್ಯಾಸ ಮಾಡುತ್ತಾನೆ. ನಿರಂತರ ಅಭ್ಯಾಸ ಅವನ ಶ್ರದ್ಧಾಭಕ್ತಿಯನ್ನು ಇಮ್ಮಡಿಗೊಳಿಸುತ್ತದೆ. ಶ್ರದ್ಧಾಭಕ್ತಿಗಳೆ ಅವನಿಗೆ ವಿದ್ಯಾ ಗವಾಕ್ಷವಾಗುತ್ತದೆ. ಅವನ ಶ್ರದ್ಧೆಭಕ್ತಿಗೆ ಮೆಚ್ಚಿದ ಗುರು ಅರಿವಿಲ್ಲದೆ ಕನಸಿನಲ್ಲಿ ಬಂದು ಬೋಧಿಸುತ್ತಾನೆ. ಇಲ್ಲಿ ಮನೋವೈಜ್ಞಾನಿಕ ಸಾಧನೆಯನ್ನು ಅಳವಡಿಸಿಕೊಂಡಿದ್ದಾರೆ. ಮನಸ್ಸಿಗೆ ಅಸಾಧ್ಯವಾದದ್ದು ಈ ಜಗತ್ತಿನಲ್ಲಿ ಯಾವುದೂ ಇಲ್ಲ ಎನ್ನುವುದು ನಿರೂಪಿತವಾಗಿ ಆ ಮೂಲಕ ದ್ರೋಣರ ಪಾತ್ರ ಅಪೂರ್ವವಾದ ರೀತಿಯಲ್ಲಿ ಪೂರ್ಣ ಪ್ರತಿಮೆಯಾಗಿ ವಿಕಸಿತವಾಗಿದೆ.

"ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ(ಗೀತಾ. 4-39)[11]

ಗುರುಶಿಷ್ಯರಿಬ್ಬರು ಪರಸ್ಪರ ಪೂರಕರಾದವರು. ಗುರು ವಿದ್ಯಾಶಕ್ತಿಯನ್ನು ಹರಿಯಿಸುವ ನಿರಂತರ ಪಾತ್ರ, ಶಿಷ್ಯ, ವಿದ್ಯಾಶಕ್ತಿಯನ್ನು ಸ್ವೀಕರಿಸುವ ಅವಿದ್ಯೆಯ ಪಾತ್ರ. ನರರೂಪದ ವ್ಯಕ್ತಿಯನ್ನು ಗುರುವನ್ನಾಗಿ ಸ್ವೀಕರಿಸಿದ ಮೇಲೆ ಶಿಷ್ಯನು ಸದಾ ಅವನನ್ನು ಶ್ರದ್ಧಾಭಕ್ತಿಗಳಿಂದ ಪೂಜಿಸಬೇಕು.

ಆತಾ ತ್ವಂ ಗಿರಿಜಾ ಮತಿಃ ಸಹಚರಾಃ ಪ್ರಾಣಾ ಶರೀರಂ ಗೃಹಂ
ಪೂಜಾ ತೇ ವಿಷಯೋಽಭೋಗರಚನಾ ನಿದ್ರಾ ಸಮಾಧಿಸ್ಥಿತಿಃ।
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾ ಗಿರೋ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಂ ॥[12]

**ಶ್ರೀ ಶಂಕರಾಚಾರ್ಯರ ಶಿವಮಾನಸಪೂಜಾ**

ಶಿಷ್ಯನ ಶ್ರದ್ಧೆಗಳು ಹೆಚ್ಚಾದಂತೆ ಅವನ ಅವಿದ್ಯ ಕ್ಷೀಣಿಸುತ್ತದೆ. ನರದೇಹಿಯಾಗಿರುವ ಗುರುವಿನಲ್ಲಿ ಪರಾತ್ಪರ ವಸ್ತುವನ್ನೇ ಕಾಣುತ್ತಾನೆ. ಗುರುವಿನ ಸಚೇತನ ಶರೀರ ಶಿಷ್ಯನ ಮುಂದೆಯೆ ಇರಬೇಕಾಗಿಲ್ಲ. ಮಾನಸಿಕವಾಗಿ ಗುರುಶಿಷ್ಯನ ಮನಸ್ಸಿನ ಒಳಗೆ ಸ್ಥಾಪಿತನಾಗಿರುತ್ತಾನೆ. ಎಲ್ಲಿ ಹೋದರೂ ಎಲ್ಲಿದ್ದರೂ ಗುರುಕೃಪೆ ಜಾಗೃತವಾಗಿರುತ್ತದೆ. ಜಾಗ್ರದವಸ್ಥೆಯಲ್ಲಿ ಮಾತ್ರವಲ್ಲ ಕನಸಿನಲ್ಲಿಯು ಆ ಶಕ್ತಿಯ ಮಹಿಮೆ ಗೋಚರಿಸುತ್ತದೆ. ಮಾಡುವ ಪ್ರತಿಯೊಂದು ಕರ್ಮವೂ ಶಕ್ತಿಯ ಉಪಾಸನೆಯಾಗುತ್ತದೆ. ಶಿಷ್ಯನ ನಿದ್ರಾವಸ್ಥೆ ಸಮಾಧಿಯಾಗುತ್ತದೆ. ಆಡುವ ಪ್ರತಿಯೊಂದು ಮಾತು ಪ್ರಾರ್ಥನೆಯಾಗುತ್ತದೆ.
ಒಮ್ಮೆ ಒಬ್ಬರನ್ನು ಗುರುವಾಗಿ ಸ್ವೀಕರಿಸಿದ ಮೇಲೆ ಶ್ರದ್ಧೆ, ಭಕ್ತಿ ಪರಿಶುದ್ಧ ಮನಸ್ಸಿನಿಂದ ಗುರುವನ್ನು ಪೂಜಿಸಬೇಕು, ವಿದ್ಯೆಯನ್ನು ಆರ್ಜಿಸಬೇಕು. ನರಗುರು ನಿಮಿತ್ತಮಾತ್ರನ್, ಆ ನರಗುರುವಿನಲ್ಲೆ ಜಗದ್ಗುರುವನ್ನು ಕಾಣಬೇಕು.

"ನಮ್ಮ ಭಕ್ತಿಗೆ ಮೆಚ್ಚುವಾ ಸಚ್ಚಿದಾನಂದಮೆ
ಜಗದ್ಗುರು, ಏಕಲವ್ಯ. ಬೇರೆ ಗುರುವುಂಟೆ?
ನರಗುರು ನಿಮಿತ್ತ ಮಾತ್ರನ್.[13]

ಎಂದು ದ್ರೋಣರು ಹೇಳುವ ಮಾತಿನಲ್ಲಿ ಗುರುತತ್ತ್ವವನ್ನು ಕಾಣಬಹುದು. ಕುವೆಂಪು 'ರಾಮಾಯಣ ದರ್ಶನಂ'ನಲ್ಲಿ ಹೇಳಿರುವಂತೆ "ಶುದ್ಧಿಮೇಣ್ ಶ್ರದ್ಧೆ ಇರೆ ತಪ್ಪದು ತುದಿಗೆ ಸಿದ್ಧಿ ಸಾಧನೆಗೆ" ಎಂಬಂತೆ ಏಕಲವ್ಯನಿದ್ದಾನೆ. ಶಿಷ್ಯನ ಹೃದಯ ಗುರುವಿಗೆ ಅರ್ಪಿತವಾಗಿ ಸಾಧನೆಗೆ ತೊಡಗಿದಾಗ ಗುರುಕೃಪೆ ಶಿಷ್ಯನ ಕಡೆಗೆ ಹರಿಯುತ್ತದೆ. ಇದರಿಂದ ಶಿಷ್ಯ ಪೂರ್ಣ ಲಾಭವನ್ನು ಪಡೆಯುತ್ತಾನೆ.
ನಾಟಕದ ಶೈಲಿ ತಂತ್ರಗಳು ಎಲ್ಲೂ ಜಾಳುಜಾಳಿಗಿಲ್ಲ. ಎಲ್ಲಿಯೂ ಅನಾವಶ್ಯಕವಾಗಿ ಸನ್ನಿವೇಶಗಳನ್ನು ತಂದು ತುರುಕಿಲ್ಲ. ಭಾವಗಳ ಸಾಂದ್ರತೆ ತೀವ್ರವಾಗಿದ್ದರೂ ಅಭಿವ್ಯಕ್ತಿಯ ಚೌಕಟ್ಟಿನಲ್ಲಿ ಮೂಡಿರುವುದರಿಂದ ಕಥೆಯ ಶಿಲ್ಪ ಎಲ್ಲೂ ಶಿಥಿಲಗೊಂಡಿಲ್ಲ. ಭಾಷೆಯೂ ಅಷ್ಟೆ ಭಾವಕ್ಕೆ ತಕ್ಕಂತೆ ವ್ಯಕ್ತವಾಗಿದೆ. ತಾಯಿಯ ಮುಗ್ಧತೆ, ಬೆಚ್ಚು, ಬೆದರು, ಭಯದ, ದುಃಖದ ನುಡಿ ಮಗನ ಅಭಯದ, ಅಭಿಮಾನದ ನುಡಿಗಿಂತ ಭಿನ್ನವಾಗಿದೆ. ತಾಯಿಯ ಮಾತಿನಲ್ಲಿ ಸಂಸ್ಕೃತದ ಸೋಂಕಿಲ್ಲ. ವಿದ್ವತ್ ಪೂರ್ಣವಾಗಿಲ್ಲ". ಏಕಲವ್ಯನ ಮಾತಿನಲ್ಲಿ ಇವೆಲ್ಲಾ ಸ್ವಲ್ಪ ಇಣುಕಿದೆ, ಅದು ಸಹಜವಾಗೂ ಇದೆ. "ಕಲಿಸಿದನ್ ಬಿಲ್‌ಬಿಜ್ಜೆಯೊಡನೆ ಸಕ್ಕದಕ್ಕರ ಬಿಜ್ಜೆಯಂ"[14] ಇಲ್ಲಿ ದ್ರೋಣರು ಏಕಲವ್ಯನನ್ನು ತಮ್ಮ ಮನೆಯಲ್ಲಿಟ್ಟುಕೊಂಡು
ವಿದ್ಯೆಯನ್ನು ಕಲಿಸಿರುತ್ತಾರೆ. ಅದರೊಂದಿಗೆ ಸಂಸ್ಕೃತವನ್ನು ಹೇಳಿಕೊಟ್ಟಿದ್ದಾರೆ. ಹಾಗಾಗಿ ಏಕಲವ್ಯನ ಭಾಷೆ ಸುಧಾರಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಏಕಲವ್ಯ-ದ್ರೋಣರ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ವ್ಯತ್ಯಾಸವಿರುವುದು ಕಂಡುಬರುತ್ತದೆ. ಇನ್ನು ಇಂದಿನ ಭಾಷೆಗೆ ಅಲ್ಲಲ್ಲಿ ಹಳಗನ್ನಡದ ಧಾಟಿಯ ಭಾಷೆ ಬೆರೆತಿದೆ. ನಾಟಕ ಸೊಗಸಾಗಿ ಮೂಡಿಬಂದಿದೆ. ಕುವೆಂಪು ಅವರ ಪ್ರತಿಭೆ ನಾಟಕದ ಉದ್ದಕ್ಕೂ ಪ್ರತಿಯೊಂದು ದೃಶ್ಯದಲ್ಲೂ, ಪ್ರತಿಪಾತ್ರದ ಮಾತುಗಳಲ್ಲೂ ಅನಾವರಣಗೊಳ್ಳುತ್ತದೆ.
ಮೊದಲ ದೃಶ್ಯದಲ್ಲಿ ಏಕಲವ್ಯನಿಗೆ ಗುರುಗೋಚರವಾಗದಿದ್ದರೂ, ಗುರುವಿನ ಪ್ರಭಾವ ದಟ್ಟವಾಗಿದೆ. ಹಾಗಾಗಿ 'ಗುರು' ಎಂದು ಈ ಭಾಗವನ್ನು ಕರೆದಿರುವುದು ಔಚಿತ್ಯಪೂರ್ಣವಾಗಿದೆ. ಗುರುಸ್ತುತಿಯಿಂದ ಆರಂಭಗೊಂಡು, ಗುರುತತ್ವದೊಂದಿಗೆ ಬೆಳೆಯುತ್ತಾ, ಗುರುವಿನ ಆಗಮನದೊಂದಿಗೆ ಪೂರ್ಣಗೊಳ್ಳುತ್ತದೆ. ಒಟ್ಟಿನಲ್ಲಿ ಮೊದಲ ದೃಶ್ಯ ಕರ್ಮರಂಗಕ್ಕೆ ಬೇಕಾದ ಎಲ್ಲಾ ಪರಿಕರಗಳನ್ನು ಸಿದ್ಧಪಡಿಸಿದೆ. "ಬೇಂದ್ರೆ ಅವರ ಮಾತಿನಲ್ಲಿ ಹೇಳುವುದಾದರೆ ಕುವೆಂಪು ಜಗದ ಕವಿ, ಯುಗದ ಕವಿ, ಜಗತ್ತಿನ ಯಾವುದೇ ಶ್ರೇಷ್ಠ ಕವಿಗೆ ಹೆಗಲೆಣೆಯಾಗಿ ನಿಲ್ಲಬಲ್ಲ ಮಹಾಕವಿ, ಅವರ ಸಾಹಿತ್ಯ ಅಷ್ಟು ಶ್ರೀಮಂತವಾದದ್ದು ಉನ್ನತವಾದುದು.

**ಆಕರ ಗ್ರಂಥಗಳು:**


1. ಬೆರಳ್ ಕೊರಳ್ – ಕುವೆಂಪು ('ಬೆರಳ್‌ಗೆ ಕೊರಳ್' ನಾಟಕ)
2. ಕುವೆಂಪು ವ್ಯಕ್ತಿತ್ವ ಮತ್ತು ಸಾಹಿತ್ಯ- ಮ.ಶಿವನಂಜಯ್ಯ ('ಬೆರಳ್‌ಗೆ ಕೊರಳ್'ನ ತಂತ್ರ ಮತ್ತು ಶಿಲ್ಪ)
3. ಕುವೆಂಪು ಸಾಹಿತ್ಯ ಕೆಲವು ಅವಲೋಕನಗಳು – ದೇ.ಜ.ಗೌ.
4. ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
5. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ – ಎಂ.ಸಿ.ವಿ.
6. ಕುವೆಂಪು ಸಾಹಿತ್ಯಲೋಕ-2- ಸಂಪಾದಕರು – ಹ.ಕ.ರಾಜೇಗೌಡ (ಬೆರಳ್‌ಗೆ ಕೊರಳ್, ಹೆಬ್ಬೆರಳು ಮತ್ತು ಪರ್ಪಸ – ಡಾ. ಕೆ.ಜಿ.ನಾರಾಯಣ ಪ್ರಸಾದ್)